



ಕುದುರೆ ಎಂದರೆ ಕಣ್ಣಮುಂದೆ ಬರುವುದು ಅದರ ಅಸಾಧಾರಣ ವೇಗ. ಯುದ್ಧರಂಗದಲ್ಲಿ ಸವಾರರನ್ನು ಹೊತ್ತು ಶರವೇಗದಲ್ಲಿ ಓಡುವ, ರೇಸ್‌ಕೋರ್ಸ್ ಅಂಗಳದಲ್ಲಿ ಬಿರುಗಾಳಿಯಂತೆ ಕಾಣಿಸುವ ಕುದುರೆಗಳನ್ನು ಕಾಮದ ಸಂಕೇತವಾಗಿಯೂ ಬಳಸಲಾಗುತ್ತದೆ. ಇದೆಲ್ಲ ಮನುಷ್ಯ ಪಳಗಿಸಿದ ಕುದುರೆಗಳ ಕಥೆಯಾಯಿತು. ಅಲೆಮಾರಿಗಳಾಗಿರುವ ಕಾಡು ಕುದುರೆಗಳದು ಬೇರೆಯದೇ ಕಥೆ. ಜಗತ್ತಿನ ವಿವಿಧ ಭಾಗಗಳಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿರುವ ಕಾಡು ಕುದುರೆಗಳ ಅಳಿವು ಉಳಿವಿನ ಬಗ್ಗೆ ಚರ್ಚೆಗಳು ಆಗಾಗ ನಡೆಯುತ್ತಲೇ ಇವೆ. ಅಮೆರಿಕ, ಆಸ್ಟ್ರೇಲಿಯಾಗಳಲ್ಲಿ ಅವುಗಳ ನಿರ್ವಹಣೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ನಮ್ಮಲ್ಲಿ ಕಾಡಂಚಿನ ಪ್ರದೇಶಗಳಲ್ಲಿ ಆನೆ ಮತ್ತು ಮನುಷ್ಯರ ನಡುವೆ ಸಂಘರ್ಷ ನಡೆದಂತೆ, ಕೆಲವು ದೇಶಗಳಲ್ಲಿ ಕಾಡು ಕುದುರೆಗಳೊಂದಿಗೆ ಸಂಘರ್ಷ ನಡೆದಿದೆ. ಭಾರತದಲ್ಲೂ ಕಾಡು ಕುದುರೆಗಳಿದ್ದರೂ, ಸದ್ಯಕ್ಕವು ಮನುಷ್ಯರಿಗೆ ಸಮಸ್ಯೆಯಾಗಿ ಪರಿಣಮಿಸಿಲ್ಲ. ಏನಿದು ಕಾಡು ಕುದುರೆಗಳ ವೃತ್ತಾಂತ? ಓದುಗರಿಗೆ ಕುದುರೆ ಸವಾರಿಯ ಸ್ವಾರಸ್ಯಕರ ಅನುಭವ ನೀಡುವ ವಿಶ್ಲೇಷಣೆ ಈ ಸಂಚಿಕೆಯ ‘ಸುಧಾ’ ವಿಶೇಷ.

